ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 775
ಸದಸ್ಯರ ಹೆಸರು : ಶ್ರೀ ಎಂ.ಸಿ.ವೇಣುಗೋಪಾಲ್
ಉತ್ತರಿಸುವ ದಿನಾಂಕ : 17-12-2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಮಾಜ ಕಲ್ಯಾಣ ಇಲಾಖೆಗೆ ಒಳಪಡುವ ಹಾಸ್ಟಲ್‌ಗಳ ಸಂಖ್ಯೆ ಎಷ್ಟು: ವರ್ಗವಾರು ಮಾಹಿತಿ ನೀಡುವುದು)</td><td>ವಿವರಗಳು ಕೆಳಕಂಡಂತಿದೆ.
<table>
<tr><th>ಇಲಾಖೆ</th><th colspan="2">ಮೆಟ್ರಿಕ್ ಪೂರ್ವ</th><th colspan="2">ಮೆಟ್ರಿಕ್ ನಂತರ</th><th>ಒಟ್ಟು</th></tr>
<tr><th></th><th>ಬಾಲಕರ</th><th>ಬಾಲಕಿಯರ</th><th>ಬಾಲಕರ</th><th>ಬಾಲಕಿಯರ</th><th></th></tr>
<tr><td>ಸಮಾಜ ಕಲ್ಯಾಣ</td><td>931</td><td>300</td><td>378</td><td>258</td><td>1867</td></tr>
<tr><td>ಪರಿಶಿಷ್ಟ ವರ್ಗಗಳ ಕಲ್ಯಾಣ</td><td>96</td><td>40</td><td>69</td><td>50</td><td>255</td></tr>
</table>
</td></tr>
<tr><td>ಆ)</td><td>ಸದರಿ ಹಾಸ್ಟಲ್‌ಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td><td>ಕೆಲವು ವಿದ್ಯಾರ್ಥಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.</td></tr>
<tr><td>ಇ)</td><td>ಬಂದಿದ್ದಲ್ಲಿ, ಕೈಗೊಂಡ ಕ್ರಮದ ಸಂಪೂರ್ಣ ಮಾಹಿತಿ ನೀಡುವುದು?</td><td>ವಿದ್ಯಾರ್ಥಿ ನಿಲಯಗಳ ದುರಸ್ತಿ ಮತ್ತು ಉನ್ನತೀಕರಣ, ಹೆಚ್ಚುವರಿ ಕೊಠಡಿ, ಸ್ನಾನಗೃಹ, ಶೌಚಾಲಯ, ನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ನಿಲಯಾರ್ಥಿಗಳಿಗೆ ಅವಶ್ಯವಿರುವ ಕುಡಿಯುವ ನೀರಿನ ವ್ಯವಸ್ಥೆ, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಮಂಚ, ಹಾಸಿಗೆ, ಹೊದಿಕೆ ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ.</td></tr>
</table>

ಸಕಇ 611 ಪಕವಿ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು.